**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ ಸಿ 2801/2022**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ದಿನಾಂಕಃ** 10.02.2025 **ಡಿ ಡಬ್ಲ್ಯೂ 1**

| | |
|---|---|
| ಹೆಸರು | ಖಲೀಲ್ ಅಹಮದ್ |
| ತಂದೆ ಹೆಸರು | ಬಷೀರ್ ಅಹಮದ್ |
| ವಯಸ್ಸು | 42 ವರ್ಷ |
| ಉದ್ಯೋಗ | ವ್ಯಾಪಾರ |
| ವಾಸ ಸ್ಥಳ | ಹರಿಹರ |

**ಮುಖ್ಯ ವಿಚಾರಣೆಃ** ಆರೋಪಿ ಪರ ವಕೀಲರಿಂದಃ

ಪಿರ್ಯಾದಿಯ ಪರಿಚಯವಿದೆ. ಪಿರ್ಯಾದಿ ತಂದೆ ಹೆಸರು ಅಲ್ಲಾವುದ್ದೀನ್. ಪಿರ್ಯಾದಿ ಸಹ ಪ್ಲಾಸ್ಟಿಕ್ ವ್ಯಾಪಾರ ಮಾಡುತ್ತಾರೆ. ಸದರಿಯವರ ಅಂಗಡಿ ಹರಿಹರದ ಇಂಡಸ್ಟ್ರಿಯಲ್ ಎಸ್ಟೇಟ್ ಎರಿಯಾದಲ್ಲಿ ಇದೆ. ನನ್ನ ಅಂಗಡಿ ಸಹ ಅವರ ಅಂಗಡಿ ಪಕ್ಕದಲ್ಲಿ ಇದೆ. ಹಾಗಾಗಿ ಪಿರ್ಯಾದಿ ನನಗೆ ಪರಿಚಯ. ಪಿರ್ಯಾದಿ ನನಗೆ ಸಾಲ ಒದಗಿಸಿಕೊಡುತ್ತೇನೆ ಎಂದು ನನ್ನ ಆಕ್ಸಿಸ್ ಬ್ಯಾಂಕ್ ನ ಸಹಿ ಮಾಡಿದ 2 ಖಾಲಿ ಚೆಕ್ ಗಳನ್ನು, 200/- ರೂಗಳ 1 ಬಾಂಡ್ ಪೇಪರ್, ಆಧಾರ ಪ್ರತಿ, ಪಾನ್ ಕಾರ್ಡ ಪ್ರತಿಗಳನ್ನು ಪಡೆದುಕೊಂಡಿದ್ದರು. ನಂತರ ನಾನು ಮತ್ತು ಪಿರ್ಯಾದಿ ಕೆನರಾ ಬ್ಯಾಂಕಿಗೆ ಸಾಲ ಪಡೆಯಲು ಹೋದೆವು. ಸದರಿ ಸಂದರ್ಭದಲ್ಲಿ ಬ್ಯಾಂಕಿನವರು ಸಾಲಕ್ಕಾಗಿ ಬೇಕಾದ ದಾಖಲಾತಿಗಳನ್ನು ತೆಗೆದುಕೊಂಡು ಬರಲು ಹೇಳಿದರು. ಸದರಿ ಸಂದರ್ಭದಲ್ಲಿ ನನ್ನ ದಾಖಲಾತಿಗಳನ್ನು ಪಿರ್ಯಾದಿಯೇ ತಮ್ಮ ಬಳಿ ಇಟ್ಟುಕೊಂಡಿದ್ದರು. ತದನಂತರ ಪಿರ್ಯಾದಿ ನನ್ನ ಗ್ರಾಹಕರಿಂದ ಮಾಲು ಪಡೆದಿದ್ದರಿಂದ ನನಗೆ ಮತ್ತು ಪಿರ್ಯಾದಿಗೆ ವ್ಯವಹಾರದಲ್ಲಿ ಸ್ವಲ್ಪ ಮನಸ್ತಾಪ ಉಂಟಾಯಿತು. ಈ ಬಗ್ಗೆ ನಮ್ಮ ಅಂಗಡಿ ಕೆಲಸಗಾರರು ಈ ಬಗ್ಗೆ ವಿಚಾರಿಸಲು ಹೋದಾಗ ನಿಮಗೆ ಪಾಠ ಕಲಿಸುತ್ತೇನೆ ಎಂದು ಹೇಳಿದ್ದರು. ಈ ರೀತಿ ಹೇಳಿದ್ದರಿಂದ ನನಗೆ ಹೆದರಿಕೆಯಾಗಿ ನಾನು ಪಿರ್ಯಾದಿಯನ್ನು ನನ್ನ ಚೆಕ್ ನ್ನು ಮರಳಿ ನೀಡುವಂತೆ ಕೇಳಿದೆನು. ಆದರೆ ಪಿರ್ಯಾದಿ ಎಲ್ಲಿ ಇದೆ ನೋಡಿ ಕೊಡುತ್ತೇನೆ ಎಂದು ಹೇಳಿ ನನಗೆ ಮರಳಿ ನೀಡಲಿಲ್ಲ ತದನಂತರ ನಾನು ನನ್ನ ಆಕ್ಸಿಸ್ ಬ್ಯಾಂಕ್ ಗೆ ಹೋಗಿ ನಗದೀಕರಣ ಮಾಡದಂತೆ ಅರ್ಜಿಯನ್ನು ನೀಡಿದೆನು. ತದನಂತರ ನಾನು ಊರಲ್ಲಿ ಇಲ್ಲದಿದ್ದಾಗ ಪಿರ್ಯಾದಿ ನನ್ನ ಮನೆಯಲ್ಲಿದ್ದ ನನ್ನ ಟಿ ವಿ ಎಸ್ ಬೈಕನ್ನು ತೆಗೆದುಕೊಂಡು ಹೋಗಿದ್ದರು. ಈ ವಿಚಾರವಾಗಿ ನಾನು ಪೊಲೀಸರಿಗೆ

ದೂರು ನೀಡಿದೆನು. ನಂತರ ಪೊಲೀಸರು ನನ್ನ ಬೈಕನ್ನು ಪಿರ್ಯಾದಿ ಅಂಗಡಿ ಬಳಿ ಜಪ್ತು ಮಾಡಿದ್ದರು. ನಂತರ ನಾನು ಸದರಿ ಬೈಕನ್ನು ನ್ಯಾಯಾಲಯದ ಆದೇಶದ ಮೇರೆಗೆ ಬಿಡಿಸಿಕೊಂಡಿರುತ್ತೇನೆ. ನಂತರದಲ್ಲಿ ಪಿರ್ಯಾದಿ ನನ್ನ ಒಂದು ಚೆಕ್ ನ್ನು ನಗದೀಕರಣಕ್ಕೆ ಹಾಜರುಪಡಿಸಿ ಈ ಪ್ರಕರಣ ದಾಖಲಿಸಿರುತ್ತಾರೆ ಇನ್ನೊಂದು ಚೆಕ್ ಪಿರ್ಯಾದಿ ಬಳಿ ಇದೆ. ಪಿರ್ಯಾದಿಗೆ ನೀಡಿದ ಚೆಕ್ ನ್ನು ನಾನು ಗುರುತಿಸುತ್ತೇನೆ. ಸಾಕ್ಷಿಗೆ ನಿಪಿ.1 ನ್ನು ತೋರಿಸಲಾಗಿ ಅದು ನಾನು ಪಿರ್ಯಾದಿಗೆ ನೀಡಿದ ಚೆಕ್ ಎಂದು ಗುರುತಿಸಿರುತ್ತಾರೆ. ನಿಪಿ.1 ರಲ್ಲಿ ಬರೆದಿರುವ ಮೊತ್ತಕ್ಕೂ ನನಗೂ ಯಾವುದೇ ಸಂಬಂದ ಇಲ್ಲ. ನಾನು ಪಿರ್ಯಾದಿಗೆ ನಿಪಿ.1 ನ್ನು ನೀಡಿದಾಗ ಅದು ಖಾಲಿ ಇತ್ತು. ಪಿರ್ಯಾದಿ ನನಗೆ ಲೀಗಲ್ ನೊಟೀಸ್ ನೀಡಿದ್ದು ಅದಕ್ಕೆ ನಾನು ಮರುಉತ್ತರ ನೀಡಿರುತ್ತೇನೆ. ಈ ಪ್ರಕರಣ ದಾಖಲಾದ ನಂತರ ನಾನು ಪಿರ್ಯಾದಿ ವಿರುದ್ಧ ನ್ಯಾಯಾಲಯಕ್ಕೆ ಖಾಸಗಿ ದೂರು ದಾಖಲಿಸಿರುತ್ತೇನೆ. ಸದರಿ ದೂರನ್ನು ನನ್ನ ಚೆಕ್ ಗಳನ್ನು ಕೊಡಿಸಬೇಕೆಂದು ಸಲ್ಲಿಸಿರುತ್ತೇನೆ. ಪಿರ್ಯಾದಿ ಸದರಿ ಖಾಸಗಿ ದೂರಿನಲ್ಲಿ ಹಾಜರಾಗಿದ್ದಾರೆ. ಸದರಿ ಪಿ ಸಿ ಆರ್ ನಲ್ಲಿ ಪಿರ್ಯಾದಿ ಮಾನ್ಯ ಉಚ್ಚ ನ್ಯಾಯಾಲಯದಿಂದ ತಡೆಯಾಜ್ಞೆ ಆದೇಶ ಪಡೆದುಕೊಂಡಿದ್ದಾರೆ. ಸದರಿ ಆದೇಶದ ಪ್ರಕರಣದ ಸಂಖ್ಯೆ ನನಗೆ ಗೊತ್ತಿಲ್ಲ. ನಾನು ಪಿರ್ಯಾದಿ ಬಳಿ ಯಾವುದೇ ಹಣ ಪಡೆದಿಲ್ಲ ಆದ್ದರಿಂದ ಯಾವುದೇ ಹಣ ನೀಡಲು ಭಾದ್ಯಸ್ಥನಲ್ಲ. ಪಿರ್ಯಾದಿ ನನ್ನನ್ನು ಯಾವುದೇ ರಾಜೀ ಸಂಧಾನಕ್ಕೆ ಕರೆದಿಲ್ಲ.

ಸಾಕ್ಷಿಯ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು ಮುಂದೂಡಲಾಯಿತು.

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ಹರಿಹರ